ಗುತ್ತದೆ. ಮುನಿಸಿಪಾಲಿಟಿಗಳಲ್ಲಿ ಮಾಡಿದ ಮೇಲೆ ಪಂಚಾಯತು ಗಳಲ್ಲಿಯೂ ಮಾಡಬೇಕಾಗುತ್ತದೆ. ಬಹುಶಃ ಅದರ ಪ್ರಮಾಣ ಎಷ್ಟು ಎಂಬುದನ್ನು ಮಾನ್ಯ ಶಾಮಣ್ಣನವರು ನೋಡಿಲ್ಲವೆಂದು ಕಾಣುತ್ತದೆ. ಒಂದು ಮೇಳೆ ಅದನ್ನು ಎಕ್ಸಿಪ್ಟ್ ಮಾಡಿದರೆ ಅದು ಯಾವ ಮಟ್ಟಕ್ಕೆ ಹೋಗುತ್ತದೆ ಎಂಬುದನ್ನು ನೋಡ ಬೇಕಾಗುತ್ತದೆ. ಅಲ್ಲಿ ಏನೋ ದೊಡ್ಡ ಕಾರ್ಪೊರೇಷನ್ ಇದೆ ಕೋಟ್ಯಾಂತರ ರೂಪಾಯಿ ಸಂಪಾದನೆ ಇರಬಹುದು. ಆದರೆ ಇಟ್ ಈಸ್ ಏ ಕ್ವಶ್ಚನ್ ಆಫ್ ಪ್ರಿನ್ಸಿಪಲ್. ಇವತ್ತು ಬೆಂಗಳೂರು ನಗರ ಕಾರ್ಪೊರೇಷನ್ನಿಗೆ ಕೊಟ್ಟು ಬಿಟ್ಟರೆ ಖಜಾನೆಗೆ ಏನೂ ಬಡತನ ಬರುವುದಿಲ್ಲ. ಆದರೆ ಅದರ ತತ್ವವನ್ನು ಎಲ್ಲಾ ಕಡೆಗಳಲ್ಲಿಯೂ ಅನ್ವಯಿಸಬೇಕಾಗುತ್ತದೆ. ಅದರ ಪರಿಣಾಮ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಇವೊತ್ತಿನ ದಿವಸ ಎಷ್ಟೋ ಸಣ್ಣ ಪುಟ್ಟ ಮುನಿಸಿಪಾಲಿಟಿಗಳಲ್ಲಿ ಸಾಮಾನ್ಯವಾಗಿ ದಿನಚರಿಯ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೋಗುವುದಕ್ಕೆ ಹಣ ಇರುವುದಿಲ್ಲ. ಹಾಗೆಯೇ ಕೆಲವು ಪಂಚಾಯಿತಿಗಳ ಪರಿಸ್ಥಿತಿಯನ್ನು ಯೋಚನೆ ಮಾಡಬೇಕಾದ್ದೇ ಇಲ್ಲ. ಆದ್ದರಿಂದ ಮಾನ್ಯ ಶಾಮಣ್ಣನವರಿಗೆ ಈಗ ಸ್ವಲ್ಪ ಮನಸ್ಸಿಗೆ ಮನದಟ್ಟಾಗಿರಬೇಕೆಂದು ಕಾಣುತ್ತದೆ. ಹೀಗೆ ನಾನು ಹೇಳಿದ ಮೇಲೆ ಬಹುಶಃ ಅವರು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ತಿಳಿಯುತ್ತೇನೆ. ಅದೇ ರೀತಿ ಅವರು ಹೇಳಿದ ವಾದ ಅವರ ಮನಸ್ಸಿಗೆ ಈಗ ಸರಿಯಲ್ಲವೆಂದೂ ಹೊಳೆದಿರಬಹುದು. ಆದಕಾರಣ ಇದನ್ನು ತತ್ವಶಃ ಇದನ್ನು ಒಪ್ಪುವುದು ಕಷ್ಟವಾಗುತ್ತದೆ ಆದ್ದರಿಂದ ಮಾನ್ಯ ಶಾಮಣ್ಣನವರು ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ.—ಅಧ್ಯಕ್ಷರೆ, ಈಗ ನಮ್ಮ ಹಿರಿಯರಾದಂತಹ ಮಾನ್ಯ ನಾಗಣ್ಣನವರು ಇದನ್ನು ವಿರೋಧಿಸಿದರು, ಸಂತೋಷ. ಮಾನ್ಯ ವಾಟಾಳ್ ನಾಗರಾಜರವರು ತಮ್ಮ ದಾರಿಯಲ್ಲೇ ವಿರೋಧಿಸಿದ್ದಾರೆ. ಅದೇ ರೀತಿ ವಾದಕ್ಕೆ ವಾದವನ್ನು ಮಾಡಿ ಸರಿಯಾಗಿ ವಾದಿಸತಕ್ಕಂತಹ ಮಂತ್ರಿಯವರು ನಾನು ಹೇಳತಕ್ಕದ್ದದಲ್ಲ ಹೊರುಳಿಲ್ಲವೆಂದು ಹೇಳಿದರು. ಅವರು ಹೇಳಿದಂತಹ ಒಂದನೆಯ ವಿಚಾರದಲ್ಲಿ ಹೇಳುವುದಾದರೆ, ಇದೇ ರೀತಿ ಇರತಕ್ಕಂತಹ ಬಾಂಬೇ ಕಾರ್ಪೊರೇಷನ್, ಡೆಲ್ಲಿ ಕಾರ್ಪೊರೇಷನ್, ಮದ್ರಾಸ್ ಕಾರ್ಪೊರೇಷನ್, ಕಲ್ಕತ್ತಾ ಕಾರ್ಪೊರೇಷನ್—ಇತ್ಯಾದಿ ಕಾರ್ಪೊರೇಷನ್ನುಗಳಲ್ಲಿ ಇದನ್ನು ಕೊಡುತ್ತಿದ್ದಾರೆ ಅಲ್ಲಿ ಕೂಡ ಮುನಿಸಿಪಾಲಿಟಿಗಳು ಇವೆ. ಪಂಚಾಯಿತಿಗಳು ಇವೆ. ಆದರೂ ಕೂಡ ಅಲ್ಲಿ ಇದು ನಡೆದುಕೊಂಡು ಬರುತ್ತಿದೆ.

ಎರಡನೆಯ ವಿಚಾರವೇನೆಂದರೆ, ಜೀವನವನ್ನು ಕಾರ್ಪೊರೇಷನ್ನಿನಿಂದಲೇ ಮಾಡಬೇಕೂ, ಅದಕ್ಕೋಸ್ಕರ ಕೊಡಿ ಎಂದು ಹೇಳುವುದಿಲ್ಲ ನಾನು ಹೇಳುವುದು, ರಾಜ್ಯಾಂಗದ ಪ್ರಕಾರ ಒಬ್ಬ ಬಡವನೂ ಕೂಡ ಚುನಾವಣೆಯಲ್ಲಿ ಅರಿಸಿ ಬರಲು ಅವಕಾಶ ಇದೆ. ಅಂಥವರಿಗೆ ಕೆಲಸ ಮಾಡುವುದಕ್ಕೆ ಅನುಕೂಲ ವಾಗಲಿ ಎಂಬ ದೃಷ್ಟಿಯಿಂದ ಸಂಭಾವನೆ ಕೊಡಬೇಕೆಂದು ಹೇಳಿದ್ದೇನೆ. ಆ ದೃಷ್ಟಿಯಲ್ಲಿ ಇದನ್ನು ತೆಗೆದು ಕೊಳ್ಳಬೇಕೇ ಹೊರತು ಬೇರೇನೂ ಅಲ್ಲ ಆದ್ದರಿಂದ ಬೆಂಗಳೂರು ನಗರ ಕಾರ್ಪೊರೇಷನ್ ಆಕ್ಟ್‌ನ್ನು ಬಾಂಬೇ ಆಕ್ಟ್ ರೀತಿಯಲ್ಲಿ ಮಾರ್ಪಾಡು ಮಾಡಬೇಕೆಂದು ಒಂದು ಬಿಲ್ಲಂ ಸಹ ನಮ್ಮ ಮುಂದೆ ಬರುವುದರಿಂದ ಇದನ್ನು ನಾನು ತಂದಿದ್ದೇನೆ. ಈ ವಿಚಾರ ಮುಂದೆ ಇಲ್ಲಿ ಬಂದಾಗ ಅದರ ವಾದಿಸುವುದಕ್ಕೂ ಅನುಕೂಲವಾಗುತ್ತದೆ. ಆದ್ದರಿಂದ ಸಧ್ಯಕ್ಕೆ ನಾನು ಇದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ,

Mr. DEPUTY SPEAKER.—Is it the pleasure of House to grant leave to the member to withdraw the resolution ?

HON'BLE MEMBERS.—Yes.

The resolution was, by leave withdrawn.

(ii) Re.—Recommending the Central Government for amending the Election Rules.

MR. DEPUTY SPEARER.—Next resolution: The honble. member Sri J. L. Kabadi is not present. We shall take up the next resolution.

SRI K. M. NAGANNA (Chickpet).—I move.

"That this Assembly is of the opinion that a recommendation be made to the Central Government to amend the Eiection Rules by deleting the rule relating to filing the return of election expenses by the members of Parliament and State Assemblies, as the limit of election expenditure fixed at present is unrealistic and impracticable."

MR. DEPUTY SPEAKER.—Motion moved.

"That this Assemble is of the opinion that a recommendation be made to the Central Government to amend the Election Rules by deleting the rule relating to filing the return of election expenses by the members of Parliament and State Assemblies, as the limit of election expenditure fixed at present is unrealistic and impracticable."

† ಶ್ರೀ ಕೆ. ಎಂ. ನಾಗಣ್ಣ.—ಮಾನ್ಯ ಉಪಾಧ್ಯಕ್ಷರೇ ಈ ನಿರ್ಣಯದ ಬಗ್ಗೆ ನಾನು ಎರಡು ಸಲಹೆಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ನಾವು ಚುನಾವಣೆಯಲ್ಲಿ ಗೆದ್ದು ಬಂದು ಈ ಸಭೆಗೆ ಬಂದ ಕೂಡಲೇ ಪ್ರಮಾಣವಚನವನ್ನು ಸ್ವೀಕಾರ ಮಾಡುತ್ತೇವೆ. ಈ ಪ್ರಮಾಣ ವಚನದಲ್ಲಿ ನಾವು ಸುಳ್ಳು ಹೇಳಬಾರದು ಎಂದು ಇದೆ. ಆದರೆ ನಾವು ಮೊದಲನೆಯ ಕರ್ತವ್ಯವನ್ನು ಏನು ಮಾಡುತ್ತೇವೆ ಎಂದರೆ ಚುನಾವಣೆಯ ವೆಚ್ಚವನ್ನು ಸುಳ್ಳು ಕೊಡುತ್ತೇವೆ. ಈಗೆ ಎಲೆಕ್ಷನ್ ಖರ್ಚಿಗಾಗಿ ಸರ್ಕಾರದವರು ಏನು ಹಣವನ್ನು ಗೊತ್ತು ಮಾಡಿದ್ದಾರೆಯೋ ಅದರ ಒಳಗೆ ಖರ್ಚು ಮಾಡಬೇಕು, ಅದಕ್ಕಿಂತ ಜಾಸ್ತಿ ಆಗ ಬೇಕೆಂಬುದು ಇಲ್ಲ. ಒಂದು ವೇಳೆ ಸರ್ಕಾರದವರು ನಿಗದಿ ಮಾಡಿರುವ ಹಣಕ್ಕಿಂತ ನಾವು ಜಾಸ್ತಿ ಖರ್ಚು ಮಾಡಿದ್ದೇವೆಂದು ಲೆಕ್ಕ ಕೊಟ್ಟರೆ ನಮ್ಮ ಸದಸ್ಯತ್ವ ಹೋಗುತ್ತದೆ. ನಾವು ಜನಗಳ ವಿಶ್ವಾಸದಿಂದ ಜನತೆಯ ಮತವನ್ನು ಪಡೆದು ಬಂದು ಇಲ್ಲಿ ನಾವು ಜನಗಳ ಪರವಾಗಿ ಕೆಲಸ ಮಾಡುತ್ತಿದ್ದೇವೆ. ನಾವು ಯಾವ ರೀತಿ ಪ್ರಮಾಣವಚನ ಸ್ವೀಕಾರ ಮಾಡಿದ್ದೇವೆಯೋ ಆ ರೀತಿ ನಡೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ನಾವು ಚುನಾವಣೆಗಾಗಿ ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆಯೋ ಅಷ್ಟು ಲೆಕ್ಕವನ್ನು ಕೊಡದಿದ್ದರೆ ನಾವೇ ಅಪ್ರಮಾಣಿಕತನವನ್ನು ಕಲಿಸಿಕೊಟ್ಟ ಹಾಗಾಗುತ್ತದೆ, ಪ್ರಾಮಾಣಿಕವಾಗಿ ಆಗಿರುವ ಲೆಕ್ಕವನ್ನು ಕೊಟ್ಟರೆ ನಮ್ಮ ಸದಸ್ಯತ್ವ ಹೋಗುತ್ತದೆ. ಈ ದೃಷ್ಟಿಯಿಂದ ಸಂಸತ್ ವಿಧಾನ ಸಭಾ ಸದಸ್ಯರುಗಳ ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದಂತೆ ಈಗ ಗೊತ್ತು ಮಾಡಿರುವ ಮಿತಿಯು ಅವಾಸ್ತವಿಕ ಮತ್ತು ಅಸಾಧ್ಯ ಆಗಿರುವುದರಿಂದ ಚುನಾವಣಾ ವೆಚ್ಚಕ್ಕೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಸಲ್ಲಿಸಬೇಕೆಂಬ ನಿಯಮವನ್ನು ತೆಗೆದು ಹಾಕುವಂತೆ ಕೇಂದ್ರ ಸರ್ಕಾರದವರಿಗೆ ಶಿಫಾರಸ್ಸು ಮಾಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದಕ್ಕೆ ಮಾನ್ಯ ಸದಸ್ಯರು ತಮ್ಮ ಬೆಂಬಲವನ್ನು ಕೊಡಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಕೆ. ಎಂ. ನಾಗಣ್ಣನವರು ತಂದಿರತಕ್ಕ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸಿ ಎರಡು ಮಾತುಗಳನ್ನು ಹೇಳಲಿಚ್ಛಿಸುವುದಕ್ಕೆ ಇಷ್ಟಪಡುತ್ತೇನೆ. ಶ್ರೀಮಾನ್ ನಾಗಣ್ಣನವರು ತಮ್ಮ ನಿರ್ಣಯದಲ್ಲಿ ತಂದಿರತಕ್ಕ ವಿಷಯವು ನಿಜವಾಗಿಯೂ ಬಹಳ ಸತ್ಯಾಂಶದಿಂದ ಕೂಡಿದೆ. ಅವರೂ ಕೂಡ ಆ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ನಾವೆಲ್ಲರೂ ಕೂಡ ಚುನಾವಣೆ ಆದ ೪೫ ದಿವಸಗಳೊಳಗೆ ಚುನಾವಣೆಯ ಖರ್ಚಿನ ಬಗ್ಗೆ ಲೆಕ್ಕ ಪತ್ರಗಳನ್ನಿಟ್ಟು ಸರ್ಕಾರಕ್ಕೆ ಕೊಡಬೇಕು. ಈ ಕಾಲದಲ್ಲಿ ನಾವು ಕೊಡತಕ್ಕ ಚುನಾವಣಾ ಖರ್ಚಿನ ಲೆಕ್ಕ ಬಹಳ ಅಸತ್ಯದಿಂದ ಕೂಡಿರುತ್ತದೆ ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಶಾಸನ ಸಭಾ ಸದಸ್ಯರಂ ಚುನಾವಣೆಗೆ ಎಷ್ಟು ಹಣವನ್ನು ಖರ್ಚು ಮಾಡಬೇಕು ಎಂದು ಇದೆ, ಪಾರ್ಲಿಮೆಂಟ್ ಸದಸ್ಯರು ಚುನಾವಣೆಗೆ ಎಷ್ಟು ಹಣವನ್ನು ಖರ್ಚು ಮಾಡಬೇಕೆಂಬುದು ಇದೆ ಅದೆಲ್ಲವೂ ಪಟೋಲ್ರಲು, ಬಾವುಟಿ, ವಾಲ್ ಪೋಸ್ಟ್‌ಗಳು ಮತ್ತು ವಾಹನಗಳ ಬಾಡಿಗೆಗೇ ಖರ್ಚಾಗಿ ಮುಗಿದು ಹೋಗುತ್ತದೆ. ಇನ್ನೂ ಬೇರೆಬೇರೆ ದೊಡ್ಡ ದೊಡ್ಡ ಖರ್ಚುಗಳು ಇರುತ್ತದೆ. ಅದನ್ನು ಬಿಟ್ಟು ಈ ಸಣ್ಣ ಪಟಂಗಳಿಗೇ ಸರ್ಕಾರದವರು ಗೊತ್ತು ಮಾಡಿರುವ ಹಣವೆಲ್ಲಾ ಖರ್ಚಾಗುತ್ತದೆ. ಇಲ್ಲಿರತಕ್ಕ ಮಾನ್ಯ ಸದಸ್ಯರಿಗೆ ಅದರ ಪರಿಚಯ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಸರ್ಕಾರದವರು ನಿಗದಿ ಮಾಡಿರುವ ವೆಚ್ಚಕ್ಕಿಂತ ಹೆಚ್ಚು ಖರ್ಚಾದದ್ದನ್ನು ಲೆಕ್ಕ ಕೊಡುವ ಹಾಗಿಲ್ಲ. ಈ ದೃಷ್ಟಿಯಿಂದ ನಾವು ಚುನಾವಣಾ ಖರ್ಚಿನ ಬಗ್ಗೆ ಏನಂ ಲೆಕ್ಕವನ್ನು ಸರ್ಕಾರಕ್ಕೆ ಕೊಡುತ್ತೇವೆಯೋ ಅದು ಅಸತ್ಯದಿಂದ ಕೂಡಿರುತ್ತದೆ. ಸರ್ಕಾರದವರು ನಿಗದಿ ಮಾಡಿರತಕ್ಕ ವೆಚ್ಚದ ಪ್ರಮಾಣ ಎಷ್ಟು ಇದೆ ಆ ಪ್ರಮಾಣದ ಮಿತಿಯೊಳಗೇ ಖರ್ಚು ಮಾಡಿ ಚುನಾವಣೆಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. [* * *]

ಎಲ್ಲರಿಗೂ ಅದು ಅನ್ವಯಿಸುತ್ತದೆ. ಪಾರ್ಲಿಮೆಂಟ್ ಸದಸ್ಯರ ಚುನಾವಣೆಗೇ ಆಗಲೀ ವಿಧಾನಸಭಾ ಸದಸ್ಯರ ಚುನಾವಣೆಗೇ ಆಗಲೀ ಸರ್ಕಾರದವರು ಎಷ್ಟು ಹಣವನ್ನು ಚುನಾವಣಾ ವೆಚ್ಚಕ್ಕೆ ಖರ್ಚು ಮಾಡಬೇಕೆಂದು ನಿಗದಿ ಮಾಡಿದ್ದಾರೆಯೋ ಅಷ್ಟರಲ್ಲೇ ಖರ್ಚು ಮಾಡಿ ಚುನಾವಣೆಯನ್ನು ಮುಗಿಸುವುದಕ್ಕಾಗುವುದಿಲ್ಲ. ಇನ್ನೂ ಜಾಸ್ತಿ ಹಣವನ್ನು ಖರ್ಚು ಮಾಡಬೇಕಾ

ಗುತ್ತದೆ ಎಂದು ನನ್ನ ಅಭಿಪ್ರಾಯ. ಇದನ್ನು ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಚನ್ನಬಸಪ್ಪನವರು ಒಪ್ಪುತ್ತಾರೆಂದು ನಾನು ಭಾವನೆ ಮಾಡಿದ್ದೇನೆ. ಈ ದೃಷ್ಟಿಯಿಂದ ಶ್ರೀಮಾನ್ ನಾಗಣ್ಣನವರು ಈಗ ಇಲ್ಲಿ ತಂದಿರತಕ್ಕ ನಿರ್ಣಯ ಬಹಳ ಮೆಚ್ಚತಕ್ಕದ್ದು. ಆದಕ್ಕಾಗಿ ಈ ನಿರ್ಣಯವನ್ನು ಈ ಸಭೆಯಲ್ಲಿ ಪಾಸು ಮಾಡಿ ಇದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು. ಈಗಿನ ಬೆಲೆಯ ಪ್ರಕಾರ ಚುನಾವಣೆಗೆ ಎಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ ಎಂಬುದನ್ನು ಲೆಕ್ಕ ಹಾಕಿ ಅದಕ್ಕನುಗುಣವಾಗಿ ಈ ಖರ್ಚನ್ನು ನಿಗದಿ ಮಾಡಬೇಕು ಈಗ ಚುನಾವಣಾ ಖರ್ಚಿನ ಲೆಕ್ಕವನ್ನು ಚುನಾವಣೆಯಾದ ೪೫ ದಿನಗಳೊಳಗೆ ಕೊಡಬೇಕೆಂದು ಏನು ನಿಗದಿ ಮಾಡಿದ್ದಾರೆ ಅದನ್ನು ೪೫ ದಿವಸಗಳು ಕಳೆದ ಮೇಲೆ ಕೊಡಬೇಕು ಎಂದು ಮಾಡುವುದು ಒಳ್ಳೆಯದು. ಇಷ್ಟು ಹೇಳಿ ಈ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸಿ ನಾನು ನನ್ನ ಮಾತನ್ನು ಮುಂಗಿಸುತ್ತೇನೆ.

[* * *] Word/Words expunged as orderd by the Chair.

SRI VATAL NAGARAJ.—(Stood of to speak)

MR. DEPUTY SPEAKER.—The hon. member will be called upon to speak next time. Now the House will adjourn and meet on Tuesday the 19th at 12 Noon and there will be no question hour on hat day.

The House adjourned at one of the Clock to meet again at Twelve of the Clock on Tuesday 19th December 1972.

WD 18889 GPB—550—2—2—1974